


ಮತ್ತೊಬ್ಬ ನೊಬೆಲ್ ಬಹುಮಾನಿತ ಜೋಸೆಫ್ ರಾಟ್ ಬ್ಲ್ಯಾಟ್ ಇದ್ದ ಸ್ಥಳ





ಮೇರಿ ಕ್ಯೂರಿ ಶಾಲೆಗೆ ಹೋಗುತ್ತಿದ್ದಾಗ ರಷ್ಯನ್ ಸೈನಿಕರು ಕವಾಯತು ನಡೆಸುತ್ತಿದ್ದ ಸ್ಥಳ

ಈಗ ಅದನ್ನು ಪ್ರತ್ಯಕ್ಷವಾಗಿ ನೋಡುತ್ತಿದ್ದೇನೆ. ಹಲವಾರು ದಿಕ್ಕುಗಳಿಂದ ಅದರ ಫೋಟೊ ತೆಗೆದೆ. ಆ ಮನೆಯಿಂದ ಓರ್ವ ವ್ಯಕ್ತಿ ಹೊರಬಂದರು. ಇಂಗ್ಲಿಷ್ ಬಲ್ಲವರು.

‘ಹೌದು, ಇಲ್ಲಿಯೇ ಮೇರಿ ಕ್ಯೂರಿ ಇದ್ದದ್ದು. ತನ್ನ ಬಾಲ್ಯವನ್ನು ಕಳೆದದ್ದು. ಆದರೆ ಎರಡು ಯುದ್ಧಗಳ ನಂತರ ಆ ಮನೆ ನಾಶವಾಗಿದೆ, ಈಗ ಹೊಸ ಮನೆ ಇದು’ ಎಂದರು.

ನನ್ನ ಆನಂದಕ್ಕೆ ಪಾರವೇ ಇಲ್ಲ. ಅವರು ಮಾತನಾಡುತ್ತಾ ಮತ್ತೊಂದು ವಿಷಯವನ್ನು ಹೇಳಿದರು: ‘ಈ ಬೀದಿಗೆ ನೊಬೆಲ್ ಬಹುಮಾನಿತರ ಬೀದಿ’ ಎಂದು ಹೆಸರು. ಹೀಗೇ ಇನ್ನೂರು ಮೀಟರ್ ಹೋಗಿ. ಅಲ್ಲಿ ಜೋಸೆಫ್ ರಾಟ್ ಬ್ಲ್ಯಾಟ್ ವಾಸವಿದ್ದರು. ಆತ ಮ್ಯಾನ್ ಹ್ಯಾಟನ್ ಪ್ರಾಜೆಕ್ಟಿನಲ್ಲಿ ಕೆಲಸ ಮಾಡುತ್ತಿದ್ದನು. ಅದರಲ್ಲಿ ಬಾಂಬ್ ತಯಾರಿಸುತ್ತಾರೆ ಎಂದು ತಿಳಿದ ತಕ್ಷಣ ಕೆಲಸಕ್ಕೆ ರಾಜೀನಾಮೆ ಕೊಟ್ಟ ಬ್ಲ್ಯಾಟ್ ಶಾಂತಿಗಾಗಿ ತನ್ನ ಬದುಕನ್ನು ಅರ್ಪಿಸಿಕೊಂಡ. ಅದಕ್ಕಾಗಿ 1995ರಲ್ಲಿ ಆತನಿಗೆ ನೊಬೆಲ್ ಬಹುಮಾನ ಬಂತು. ಹೀಗೇ ಮುಂದಕ್ಕೆ ಹೋಗಿ... ಒಂದು ಚಿಕ್ಕ ಬಯಲಿದೆ, ಅದಕ್ಕೆ ಅವನದೇ ಹೆಸರು’.

ಗೂಗಲ್ ಮಾಡಿದಾಗ ರಾಟ್ ಬಗ್ಗೆ ಹೆಚ್ಚಿನ ವಿಷಯ ತಿಳಿಯಿತು. ಜರ್ಮನ್ನರು ಬಾಂಬ್ ತಯಾರಿಸುತ್ತಾರೆ ಎಂಬ ಭೀತಿ ತಲೆದೋರಿ, ಅಮೆರಿಕ ಬಾಂಬ್ ತಯಾರಿಕೆಗೆ ಮುಂದಾಯಿತು. ಆದರೆ ಬಹು ಬೇಗ ಜರ್ಮನಿ ಬಾಂಬ್ ತಯಾರಿಕೆ ನಿಟ್ಟಿನಲ್ಲಿ ಏನೂ ಮಾಡಿಲ್ಲ ಎಂಬುದು ಖಾತರಿಯಾಯಿತು. ಹೀಗಿದ್ದರೂ ಅಮೆರಿಕ ತನ್ನ ಪ್ರಯತ್ನವನ್ನು ಮುಂದುವರೆಸಿತು. ಇದರಿಂದ ಮನನೊಂದು ರಾಟ್, ಮ್ಯಾನ್ ಹ್ಯಾಟನ್ ಯೋಜನೆಯಿಂದ ಹೊರಬಂದ.

ರಸ್ತೆಯ ಕೆಳಭಾಗಕ್ಕೆ ಧಾವಿಸಿಹೋದೆವು. ಎಲ್ಲಿಯೂ ರಾಟ್ ಹೆಸರು ಕಾಣಲಿಲ್ಲ. ಎರಡು ಬಾರಿ ಮೇಲಿಂದ ಕೆಳಕ್ಕೆ ಹೋದೆವು. ಉಪಯೋಗವಾಗಲಿಲ್ಲ. ಅಲ್ಲೊಂದು ಭಾರತೀಯ ರೆಸ್ಟೋರೆಂಟ್ ಕಾಣಿಸಿ, ಅವರನ್ನು ಕೇಳಿದೆವು. ಅವರಿಗೂ ಗೊತ್ತಿಲ್ಲ. ಸ್ವಲ್ಪ ನಿಧಾನಿಸಿ ನೋಡಿದರೆ ಆ ಹೋಟೆಲಿನ ಪಕ್ಕದ ಮೈದಾನವೇ ರಾಟ್ ನೆನಪಿನ ಸ್ಥಳವಾಗಿತ್ತು. ಅಲ್ಲಿ ಫಲಕವೊಂದಿತ್ತು. ಇದೇಕೆ ಮುಂಚೆ ನಮ್ಮ ಕಣ್ಣಿಗೆ ಬೀಳಲಿಲ್ಲವೋ? ಮಧ್ಯವಯಸ್ಕರೊಬ್ಬರು ಅಲ್ಲಿ ಕುಳಿತಿದ್ದರು. ಅವರನ್ನು ಕೇಳಿದಾಗ, ಅವರು ರಾಟ್ ಬಗ್ಗೆ ಒಂದು ಚಿಕ್ಕ ಭಾಷಣವನ್ನೇ ಮಾಡಿ, ಅಲ್ಲಿದ್ದ ಮಿಕ್ಕ ಪೋಲಿಷ್ ಫಲಕಗಳನ್ನು ತೋರಿಸಿ ನಮಗಾಗಿ ಭಾಷಾಂತರವನ್ನೂ ಮಾಡಿದರು.

ಒಂದೇ ಬೀದಿಯಲ್ಲಿ, ತನ್ನ ಕುಟುಂಬದಲ್ಲಿ ಐವರು ನೊಬೆಲ್ ಬಹುಮಾನಿತರನ್ನು ಹೊಂದಿದ್ದ ಮೇರಿ ಕ್ಯೂರಿ ಬೆಳೆದ ಮನೆ, ಇತ್ತ ಶಾಂತಿಗಾಗಿ ನೊಬೆಲ್ ಬಹುಮಾನ ಗಳಿಸಿದ ಜೋಸೆಫ್ ರಾಟ್ ಬ್ಲ್ಯಾಟ್ ಬಾಳಿದ ಸ್ಥಳ, ಎರಡನ್ನೂ ಒಮ್ಮೆಗೆ, ವಾರ್ಸಾಗೆ ಬಂದಿಳಿದ ಕೆಲವೇ ಗಂಟೆಗಳಲ್ಲಿ ನೋಡಿದ ಹೆಗ್ಗಳಿಕೆ ನಮ್ಮದು.

ಪ್ರತಿಕ್ರಿಯಿಸಿ: feedback@sudha.co.in